

ಮಿತಭಾಷಿ ತಂದೆ–ತಾಯಿ ದೊಡ್ಡ ಮಗನ ಜೊತೆ ಟಿ. ನರಸೀಪುರದಲ್ಲಿದ್ದರು. ದೊಡ್ಡಮಗ ದಿನಸಿ ಅಂಗಡಿ ಇಟ್ಟಿದ್ದ. ರಾಮನಾಥ್ ತಂದೆ ಕಾಲೇಜು ಉಪನ್ಯಾಸಕರಾಗಿ ನಿವೃತ್ತರಾಗಿದ್ದರು. ಅವರಿಗೆ ಹೆಣ್ಣುಮಕ್ಕಳಿರಲಿಲ್ಲ. ದೊಡ್ಡ ಸೊಸೆ ಮೈಸೂರಿನ ಹುಡುಗಿ. ಹೆಸರಿಗೆ ತಕ್ಕಂತೆ ಸರಳವಾಗಿದ್ದಳು.

ವಸುಧಾ ಕೆಲಸ ಮಾಡಲು ರಾಮನಾಥನ ಆಕ್ಷೇಪಣೆ ಇರಲಿಲ್ಲ. ಮಲ್ಲೇಶ್ವರಂನಲ್ಲಿ ಮನೆ ಮಾಡಿದ್ದರು. ವರ್ಷ ಕಳೆಯುವಷ್ಟರಲ್ಲಿ ರಾಜರಾಜೇಶ್ವರಿ ನಗರದಲ್ಲಿ ಮೂರು ಬೆಡ್‌ರೂಂ ಫ್ಲಾಟ್ ಕೊಂಡಿದ್ದರು. ಬ್ಯಾಂಕ್‌ಲೋನ್ ಸಿಕ್ಕಿತ್ತು. ನಂತರ ಮಗಳು ತನ್ವಿ ಹುಟ್ಟಿದ್ದಳು. ರಕ್ಮಾ ಮಗಳನ್ನು ಕರೆದುಕೊಂಡು ಬಂದು ಬಾಣಂತನ ಮಾಡಿದ್ದರು. ನಂತರ ವಸುಧಾ ಮಗುವನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಿಸಿಕೊಂಡಿದ್ದಳು. ನಂತರ ಅಡುಗೆಯವರನ್ನು ಗೊತ್ತುಮಾಡಿದ್ದಳು. ತನ್ವಿ ಆಗ ಪ್ಲೇಹೋಂಗೆ ಹೋಗುತ್ತಿದ್ದಳು. ಅವಳನ್ನು ನೋಡಿಕೊಳ್ಳುತ್ತಿದ್ದ ಮಾಯಾ ತುಷಾರ್‌ನನ್ನೂ ನೋಡಿಕೊಳ್ಳುತ್ತಿದ್ದಳು. ಅಡುಗೆಯವರಿಗೆ ಹತ್ತು ಸಾವಿರ ರೂಪಾಯಿ, ಕೆಲಸದವಳಿಗೆ ಮೂರು ಸಾವಿರ ರೂಪಾಯಿ, ಮಾಯಾಳಿಗೆ ಇಪ್ಪತ್ತು ಸಾವಿರ ರೂಪಾಯಿ ಕೊಡುತ್ತಿದ್ದಳು ವಸುಧಾ.

‘ಅಪ್ಪ–ಅಮ್ಮ ನೀವು ಬಂದು ನಮ್ಮ ಜೊತೆಯೇ ಇರಿ’ ಎಂದು ವಸುಧಾ ಹಲವು ಬಾರಿ ಹೇಳಿದ್ದಳು. ಆದರೆ ಶ್ರೀಪಾದರಾಯರು ಒಪ್ಪಿರಲಿಲ್ಲ. ಹಬ್ಬ ಹರಿದಿನಗಳಲ್ಲಿ ಗಂಡ ಮಕ್ಕಳ ಜೊತೆ ವಸುಧಾ ಬರುತ್ತಿದ್ದಳು. ವಿವೇಕ್ ತಂಗಿ ಮದುವೆಗೆ ಹತ್ತು ಲಕ್ಷ ಕೊಟ್ಟಿದ್ದ. ನಂತರ ತಂದೆ–ತಾಯಿಗೆ ಒಂದು ಪೈಸೆ ಕಳಿಸಿರಲಿಲ್ಲ. ಸಾಮಾನ್ಯವಾಗಿ ದಸರಾ ಟೈಂನಲ್ಲಿ ಕುಟುಂಬ ಸಮೇತ ಬರುತ್ತಿದ್ದ. ಆಗ ವಸುಧಾ ಕೂಡ ತಮ್ಮನಿಗೆ ಕಂಪನಿ ಕೊಡುತ್ತಿದ್ದಳು. ಕೆಂಗೇರಿಯಲ್ಲಿ ನಾಲ್ಕು ದಿನಗಳಿದ್ದರೆ ಹೆಚ್ಚು. ವಿವೇಕ್‌ಗೆ ‘ಮಿಲನ’ ಎಂಬ ಮಗಳಿದ್ದಳು. ಆ ಮಗು ಕನ್ನಡ, ಹಿಂದಿ, ಇಂಗ್ಲಿಷ್ ಸ್ಪಷ್ಟವಾಗಿ ಮಾತನಾಡುತ್ತಿದ್ದಳು.

ಶ್ರೀಪಾದರಾಯರು ನಿವೃತ್ತರಾಗಿ ಹತ್ತು ವರ್ಷ ಕಳೆದಿತ್ತು. ಬೆಳಿಗ್ಗೆ ಎದ್ದು ವಾಕಿಂಗ್‌ಗೆ ಹೋಗಿ ಬಂದು ಕಾಫಿ ಕುಡಿದು, ಒಂದು ಗಂಟೆ ಪೇಪರ್ ಓದುತ್ತಿದ್ದರು. ನಂತರ ಸ್ನಾನ ಮಾಡಿ ತಿಂಡಿ ತಿಂದು ಕಲ್ಲುಬೆಂಚಿನ ಮೇಲೆ